# ಲೈಂಗಿಕ ಅಲ್ಪಸಂಖ್ಯಾತರನ್ನು ಅಪರಾಧಿಕರಿಸುವ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಪ್ರತಿಭಟಣೆ

## !!! ಭಾರತ ದಂಡ ಸಂಹಿತೆ ಕಲಂ 377ನ್ನು ಈ ಕೂಡಲೇ ತೆಗೆದು ಹಾಕಿ !!!

ನಮಗೆ ನೋವಾಗಿದೆ. ನಾವು ಕೋಪಗೊಂಡಿದ್ದೇವೆ. ನಮಗೆ ದ್ರೋಹ ಮಾಡಲಾಗಿದೆ. ಇದನ್ನು ನಾವು ಒಪ್ಪುವುದಿಲ್ಲಾ.

11ನೇ ಡಿಸೆಂಬರ್ 2013 ರಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಭಾರತ ದಂಡ ಸಂಹಿತೆ ಕಲಂ(I.P.C) 377ನ್ನು ಮಾನ್ಯ ಮತ್ತು ಸಂವಿಧಾನಿಕವಾಗಿದೆ ಎಂದು ತೀರ್ಪು ನೀಡಿದೆ. ಸಮಾಜದ ಅಸಮ್ಮತಿ ಮತ್ತು ಎಲ್ಲಾ ಮೂಲೆಗಳಿಂದ ನಡೆಯುತ್ತಿರುವ ಹಿಂಸೆಯ ವಿರುದ್ದ ಆತ್ಮ ವಿಶ್ವಾಸದಿಂದ ಸಂಘಟಿತರಾಗಿ ಹೋರಾಟ ನಡೆಸುತ್ತಿರುವ ಲೈಂಗಿಕ ಅಲ್ಪಸಂಖ್ಯಾತರಾದ ಲೆಸ್ಬಿಯನ್‌ಗಳ, ಗೇಗಳ, ದ್ವಿಲಿಂಗಕಾಮಿಗಳ, ಲಿಂಗತ್ವ ಅಲ್ಪಸಂಖ್ಯಾತರ, ಹಿಜ್ರಾಗಳ, ಕೋಥಿಗಳ, ಜೋಗಪ್ಪಗಳ, ಶಿವಶಕ್ತಿಗಳ, ಟ್ರಾನ್ಸ್ ಪುರುಷರ, ಟ್ರಾನ್ಸ್ ಮಹಿಳೆಯರ, ಅರವಾಣಿಗಳ ಮತ್ತು ಭಾರತದ ಇತರ ಪ್ರಜೆಗಳನ್ನು ಸರ್ವೋಚ್ಚ ನ್ಯಾಯಾಲಯವು ತಿರಸ್ಕಾರದಿಂದ ಮತ್ತು ನಿರ್ಲಕ್ಷದಿಂದ ನೋಡಿದೆ. ನೀಡಿರುವ ತೀರ್ಪು, ಭಾರತದಲ್ಲಿ ನೈಸರ್ಗಿಕ ಹಾಗೂ ಸಹಜ ವಿಲ್ಲದ ಲಿಂಗವನ್ನು ಗುರುತಿಸಿಕೊಳ್ಳದೇ ವಿಭಿನ್ನ ಲೈಂಗಿಕತೆ ಮತ್ತು ಲಿಂಗಹೊಂದಿರುವವರು ಮೂಲಭೂತ ಹಕ್ಕುಗಳಾದ ಮುಕ್ತವಾಗಿ ಬದುಕುವ, ಪ್ರೀತಿಸುವ, ಅಭಿವ್ಯಕ್ತಿ ಸ್ವಾತಂತ್ರ ಮತ್ತು ತಾರತಮ್ಯ ಮುಕ್ತ ಹಕ್ಕುಗಳನ್ನು ಆನಂದಿಸಲು ಅರ್ಹರಾಗಿಲ್ಲವೆಂದಿದೆ.

ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವದಲ್ಲಿ ಒಂದಾದ ನಮ್ಮ ದೇಶದಲ್ಲಿ ಈ ಸಮುದಾಯದ ಅಸ್ಥಿತ್ವವೇ ಕಾನೂನು ಬಾಹಿರವೆಂದು ಸರಳವಾಗಿ ಅಪರಾಧಿಕರಿಸಿದೆ. ಯಾವುದೇ ದೇಶವು ಯೋಚಿಸಲು ಸಾಧ್ಯವಾಗದ ರೀತಿಯಲ್ಲಿ ನಮ್ಮ ಸಮುದಾಯವು ಬಲವಂತದಲ್ಲಿ ಈ ಕಷ್ಟಕರ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದೆ. ಬಹುಸಂಖ್ಯಾತರು, ಬಹುಸಂಖ್ಯಾತರೆಂಬ ಒಂದೇ ಕಾರಣಕ್ಕೆ ಯಾವುದೇ ಅಲ್ಪಸಂಖ್ಯಾತರ ಗುಂಪು ಅಥವಾ ಕೇವಲ ಒಬ್ಬ ವ್ಯಕ್ತಿಯೇ ಆಗಿದ್ದರೂ ಅವರ ವಿರುದ್ದ ತಾರತಮ್ಯಮಾಡುವುದು ನಾವು ಖಡಾ ಖಂಡಿತವಾಗಿ ಸಹಿಸುವುದಿಲ್ಲ. ಈ ರೀತಿ "ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರಾದ" ಈ ಸಮುದಾಯದ ವಿರುದ್ಧ ನಡೆದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವ ಸಂವಿಧಾನಾತ್ಮಕ ನೈತಿಕತೆಯ ಸಿದ್ದಾಂತಕ್ಕೆ ವಿರುದ್ದವಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ನಾವು ನೋಡಿರುವಂತೆ ಇಂತಹ ವಿಚಾರಗಳಲ್ಲಿ ರಾಜ್ಯದ ನಿರ್ಲಕ್ಷತನ ಹೆಚ್ಚುತ್ತಿದ್ದು ಸಹಿಷ್ಣುತೆ ಮತ್ತು ಸಮ್ಮತಿ ಇಲ್ಲದಾಗಿದೆ. ಇಂತಹ ಬೆಳವಣಿಗೆಗಳು ದೇಶವನ್ನು ಅಪಾಯಕಾರಿ ದಾರಿಯಲ್ಲಿ ಕರೆದೊಯ್ಯುತ್ತದೆ.

ಭಾರತವು ಹಲವು ವೈವಿದ್ಯತೆಗಳಿಂದ ಕೂಡಿರುವ ದೇಶವೆಂದು ಹೇಳಿಕೊಳ್ಳುತ್ತದೆ. ಈ ವೈವಿದ್ಯತೆಯಲ್ಲಿ ಲೈಂಗಿಕ ಆದ್ಯತೆ ಮತ್ತು ಲಿಂಗತ್ವ ಅಭಿವ್ಯಕ್ತಪಡಿಸುವ ಸಮುದಾಯಗಳು ಸಹ ಒಂದು. ಬ್ರಿಟೀಶರ ರಾಜಾಳ್ವಿಕೆಯಲ್ಲಿ 1860ರಲ್ಲಿ ಕಲಂ 377 ಕಾನೂನಿನ ಮೂಲಕ ವಿಕ್ಟೋರಿಯನ್ ನೈತಿಕತೆಯನ್ನು ದೇಶದ ಜನರ ಮೇಲೆ ಹೇರಿದರು. ಇದಾದ ನಂತರ 2009ರಲ್ಲಿ ದೆಹಲಿಯ ಉಚ್ಚ ನ್ಯಾಯಾಲಯವು ಕಲಂ 377 ಸಂವಿಧಾನ ವಿರೋಧಿ ಎಂದು ತೀರ್ಪು ನೀಡಿತು. ಆದರೆ ಸರ್ವೋಚ್ಚ ನ್ಯಾಯಾಲಯವು ದೆಹಲಿ ಉಚ್ಚ ನ್ಯಾಯಾಲದ ತೀಪು್ರ ಸರಿಯಲ್ಲವೆಂದು ಹೇಳಿ 377ರ ಬಗ್ಗೆ ನಡೆದ ಬೃಹತ್ ಹೋರಾಟದ ಪ್ರಗತಿಯನ್ನು ಹಿಂದಕ್ಕೆ ಕೊಂಡೊಯ್ಯಿತು. ಸರ್ಕಾರದ ಅನೇಕ ರಾಜಕೀಯ ಪಕ್ಷಗಳು ಮತ್ತು ನಾಯಕರುಗಳು ಈ ಸದರಿ ತೀರ್ಪಿನ ವಿರುದ್ದ ಧ್ವನಿಯೆತ್ತಿರುವುದು ಸಂತೋಷಕರವಾದ ಸಂಗತಿಯಾಗಿದೆ. ಆದರೆ ಈ ಧ್ವನಿಯನ್ನು ಕಾರ್ಯರೂಪಕ್ಕೆ ತರುತ್ತಾರೆಯೇ ಎಂದು ಕಾದು ನೋಡಬೇಕಿದೆ.

ನಾವು ನಮ್ಮ ಹೋರಾಟದಲ್ಲಿ ಯಾವುದೇ ಕಾರಣಕ್ಕೆ ಸೋಲುವುದಿಲ್ಲವೆಂದು ಜನರಿಗೆ, ನ್ಯಾಯಾಲಯಕ್ಕೆ, ಸರ್ಕಾರಕ್ಕೆ ಮತ್ತು ಇಡೀ ಪ್ರಪಂಚಕ್ಕೆ ತಿಳಿಸುತ್ತಿದ್ದೇವೆ. ಈ ಜನವಿರೋಧಿ ತೀರ್ಪನ್ನು ಖಂಡಿಸುತ್ತಾ, ನಮ್ಮ ಹಕ್ಕೊತ್ತಾಯಗಳನ್ನು ಮುಂದಿಡುತ್ತಾ ಹೋರಾಟ ಮಾಡುತ್ತೇವೆಯೇ ಹೊರತು ಬಲವಂತದ ನಾಚಿಕೆ ಮತ್ತು ಮರೆಯಲ್ಲಿ ಜೀವಿಸುವುದಿಲ್ಲ. ನಾವು ಈ ಹೋರಾಟದಲ್ಲಿ ಸವಾಲುಗಳನ್ನು ಎದುರಿಸುತ್ತಾ ಬಂದಿದ್ದು, ಇತ್ತೀಚೆಗೆ ಕಳೆದ ಸರ್ಕಾರವು ರೂಪಿಸಿದ ಕಲಂ 36ಎ ಕರ್ನಾಟಕ ಪೋಲಿಸ್ ಕಾಯ್ದೆಯು ಹಿಜ್ರಾಗಳ ಮೇಲೆ ಪೋಲಿಸರ ಕಣ್ಗಾವಲಿನ ವಿರುದ್ಧವೂ ಕೂಡ ಹೋರಾಟ ಸಾರಿದ್ದೇವೆ.

ನಮ್ಮ ಈ ಹೋರಾಟದಲ್ಲಿ ಪಾಲ್ಗೊಳ್ಳಿ ! ಈ ಹೋರಾಟವು ನಮ್ಮದು, ನಿಮ್ಮದು ಮತ್ತು ಪ್ರಜಾಪ್ರಭುತ್ವವನ್ನು ಉತ್ತಮ ಪಡಿಸಲು ಬಯಿಸುವವರೆಲ್ಲದ್ದು. ಜನರು ಧೈರ್ಯವಾಗಿ ವಿಭಿನ್ನವಾದ ಆಲೋಚನೆ, ಜೀವನಶೈಲಿ ಹಾಗಿ ಅಭಿವ್ಯಕ್ತಿಸುವ ಸ್ವಾತಂತ್ರವನ್ನು ಹೊಂದಿರುವ ದೇಶವನ್ನು ಕಟ್ಟಲು ಈ ಹೋರಾಟ ಮುಂದುವರೆದಿದೆ. ಯಾವ ದೇಶದಲ್ಲಿ ಅಲ್ಪಸಂಖ್ಯಾತ ಸಮುದಾಯದ ಯಾರಬ್ಬರು, ಬೇರೊಬ್ಬರ ದ್ವೇಶಯುಕ್ತ ಆಲೋಚನೆಗೆ ಒಳಗಾಗದೆ, ತಾವು ಮನುಷ್ಯರಾಗಿರುವ ಕಾರಣ ಸ್ವತಂತ್ರ ಜೀವನದ ಹಕ್ಕನ್ನು ಹೊಂದಿರುತ್ತಾರೊ , ಅಂತಹ ದೇಶವನ್ನು ನಾವು ಕಟ್ಟಲ್ಲು ಬಯುಸುತ್ತೇವೆ. . ನೀವು ಎಂತಹ ಒಂದು ಸಮಾಜದಲ್ಲಿ ಬದುಕಲು ಬಯುಸುತ್ತೀರಾ? ನಾವು ಹೆಮ್ಮೆಪಡುವ ಸಮಾಜವನ್ನು ಕಟ್ಟಲು ಬಯಸುವ ಈ ನಮ್ಮ ಹೋರಾಟಕ್ಕೆ ಕೈ ಜೋಡಿಸಿ, ಬೆಂಬಲಿಸಿ.

**ಶಿಕ್ಷಣ! ಹೋರಾಟ! ಸಂಘಟನೆ!**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಲೈಂಗಿಕ ಅಲ್ಪಸಂಖ್ಯಾತರ ಮತ್ತು ಲೈಂಗಿಕ ಕಾರ್ಮಿಕರ ಹೋರಾಟದ ಒಕ್ಕೂಟ (ಸಿ.ಎಸ್.ಎಂ.ಆರ್), ಬೆಂಗಳೂರು

(ksmforum@gmail.com 74064–82772; 98867–88203, ಈ ಸಂಖ್ಯೆಗಳಿಗೆ ಮಿಸ್ಡ್ ಕಾಲ್‌ಕೊಡಿ)